**ಸಾಕ್ಷಿಯನ್ನು ದಿಃ02.07.2019 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಕೆಪಿಎಂ ವಕೀಲರಿಂದಃ**

ಕೋಡ್ಯಯಪ್ಪ ಎಂಬುವವರು ನನ್ನ ತಾತ. ಸದರಿ ಕೋಡ್ಯಯಪ್ಪನಿಗೆ ನನ್ನ ತಂದೆ ಮುನಿಸ್ವಾಮಿ ಮತ್ತು ದೊಡ್ಡಚಲುವಪ್ಪ ಅಂದರೆ ಒಂದನೇ ಪ್ರತಿವಾದಿಯ ತಂದೆ ಇಬ್ಬರೆ ಗಂಡು ಮಕ್ಕಳು. ಸದರಿ ದೊಡ್ಡಚಲುಪ್ಪನಿಗೆ ಮುನಿಸ್ವಾಮಪ್ಪ ಎಂದೂ ಸಹ ಕರೆಯುತ್ತಾರೆ ಎಂದರೆ ಸರಿ . ನನ್ನ ತಂದೆ ಹೆಸರು ಎ.ಕೆ. ಮುನಿಸ್ವಾಮಿ ಎಂದರೆ ಸರಿ ಸಾಕ್ಷಿ ಮುಂದುವರೆದು ಎ.ಕೆ ಎಂಬ ಇನಿಶಿಯಲ್ ಇರುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ತಂದೆಗೆ ಮೂರು ಜನ ಮಕ್ಕಳು ಇದ್ದು ಅವರುಗಳೆಂದರೆ ನಾನು , ಮೂರನೇ ವಾದಿಯ ಗಂಡ ಹಾಗೂ ಮುನಿವೆಂಕಟಪ್ಪ ಎಂಬುವವರು ಇರುತ್ತೇವೆ. ಸದರಿ ಮುನಿವೆಂಕಟಪ್ಪ ಈಗ ಜೀವಂತವಾಗಿ ಇರುವುದಿಲ್ಲ. ನನ್ನ ತಂದೆಯ ಸಹೋದರ ದೊಡ್ಡಚಲುವಪ್ಪನಿಗೆ ಮೂರು ಜನ ಮಕ್ಕಳು ಇದ್ದು ಅವರುಗಳೆಂದರೆ ಮುನಿಯಪ್ಪ ಒಂದನೇ ಪ್ರತಿವಾದಿ , ನಾರಾಯಣಪ್ಪ ಮತ್ತು ಡಿ.ಮುನಿವೆಂಕಟಪ್ಪ. ಸಾಕ್ಷಿಗೆ ಈಗ ಒಂದು ವಂಶ ವೃಕ್ಷದ ಪ್ರಮಾಣ ಪತ್ರವನ್ನು ತೋರಿಸಿ ಸದರಿ ಪ್ರಮಾಣ ಪತ್ರದಲ್ಲಿ ಕಾಣಿಸಿರುವ ವಂಶ ವೃಕ್ಷ ಪ್ರಕಾರ ಕೋಡ್ಯಯಪ್ಪನ ವಂಶ ಇರುತ್ತದೆ ಅಲ್ಲವೆ ಎಂದು ಪ್ರಶ್ನಿಸಲಾಗಿ ಸಾಕ್ಷಿಯು ಸದರಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದರ ಮೇರೆಗೆ ಸದರಿ ವಂಶ ವೃಕ್ಷದ ಪ್ರಮಾಣ ಪತ್ರವನ್ನು ನಿಡಿ 1 ಎಂದು ಗುರುತಿಸಲಾಯಿತು.

ನನ್ನ ತಂದೆ ಮತ್ತು ನನ್ನ ತಂದೆಯ ಸಹೋದರರು 1960ನೇ ಸಾಲಿನಲ್ಲಿ ಒಟ್ಟು ಕುಟುಂಬದಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ನನಗೆ ಈಗ 55 ವರ್ಷ ವಯಸ್ಸು ಇರುತ್ತದೆ ನಾನು ಹುಟ್ಟಿದ್ದು 1968ನೇ ಸಾಲಿನಲ್ಲಿ. ನಾನು ಹುಟ್ಟಿದ ಸಾಲಿನಲ್ಲಿ ನನ್ನ ತಾತ ಕೋಡ್ಯಯಪ್ಪ ಮತ್ತು ಅವರ ಮಕ್ಕಳು ಒಟ್ಟು ಕುಟುಂಬದಲ್ಲಿ ವಾಸ ಇದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ಮುನಿಯಮ್ಮ ಈಗಲೂ ಜೀವಂತ ಇದ್ದಾರೆ. ಅವರೇ ಈ ದಾವೆಯ ಒಂದನೇ ವಾದಿ.

1957ನೇ ಸಾಲಿನಲ್ಲಿ ದಾವಾ ಸರ್ವೆ ನಂಬರ್ ಗೋಮಾಳ ಜಮೀನು ಆಗಿದ್ದು ಅದರ ಹಳೆಯ ನಂಬರ್ ಸರ್ವೆ ನಂ. 117 ಇದ್ದು ಈಗ ಹೊಸ ಸರ್ವೆ ನಂ. 211 ಇರುತ್ತದೆ. ಸದರಿ

ಗೋಮಾಳದ ಜಮೀನಿನಲ್ಲಿ ಯಾವ ಯಾವ ವ್ಯಕ್ತಿಗಳು ಜಮೀನಿನ ಸ್ವಾದೀನದಲ್ಲಿದ್ದರೋ ಅವರಿಗೆ ಸರ್ಕಾರದಿಂದ ಸ್ವಾದೀನತೆಯನ್ನು ಹೊಂದಿರುವ ಜಮೀನು ಸಾಗುವಳಿ ಮುಖಾಂತರ ಮಂಜೂರು ಮಾಡಲಾಗಿರುತ್ತದೆ ಎಂದರೆ ಸರಿ .

ದಾವಾ ಸರ್ವೆ ನಂ. 211 ಅಂದರೆ ಹಳೆಯ ಸರ್ವೆ ನಂ. 117ರಲ್ಲಿ ನನ್ನ ತಂದೆ ಮುನಿಸ್ವಾಮಿಗೆ ಎರಡು ಎಕರೆ ಜಮೀನು ಹಾಗೂ ಒಂದನೇ ಪ್ರತಿವಾದಿ ದೊಡ್ಡಚಲುವಪ್ಪನಿಗೆ ಎರಡು ಎಕರೆ ಜಮೀನು ಮಂಜೂರು ಆಗಿರುತ್ತದೆ ಎಂದರೆ ಸರಿ . ಸದರಿ ಮಂಜೂರಾತಿ ದಿಃ 16-07-1957ರಲ್ಲಿ ಆಗಿರುತ್ತದೆ ಎಂದರೆ ಸರಿ . ಸದಿರಿ ಮಂಜೂರಾತಿಯನ್ನು ನನ್ನ ತಂದೆ ಹಾಗೂ ಅವರ ಸಹೋದರರಿಗೆ ಮಾಡಿದ ಸಮಯದಲ್ಲಿ ಸದರಿ ಮಂಜೂರಾತಿ ಆದ ಸ್ವತ್ತನ್ನು 15 ವರ್ಷಗಳ ಕಾಲ ಪರಬಾರೆ ಮಾಡಬಾರದೆಂಬ ಷರತ್ತನ್ನು ವಿದಿಸಿ ಮಂಜೂರಾತಿ ಮಾಡಿರುತ್ತಾರೆ ಎಂದರೆ ಸರಿ .

ದಾವಾ ಸರ್ವೆ ನಂಬರ್ ನನ್ನ ತಂದೆಗೆ ಎರಡು ಎಕರೆ ಮಂಜೂರಾತಿ ಆದ ನಂತರ ಪುನಹ ಸರ್ವೆ ನಂ. 198ರಲ್ಲಿ ಎರಡು ಎಕರೆ ಜಮೀನು ಮಂಜೂರು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನನ್ನು ಸೇರಿಸಿ ಹಾಗೂ ದಾವಾ ಸರ್ವೆ ನಂಬರ್‌ನಲ್ಲಿ ನನ್ನ ತಂದೆಗೆ ಆದ ಎರಡು ಎಕರೆ ಮತ್ತು ದೊಡ್ಡಚಲುವಪ್ಪನಿಗೆ ಆದ ಎರಡು ಎಕರೆ ಸೇರಿಸಿ ಒಟ್ಟು 6 ಎಕರೆ ಜಮೀನಿನಲ್ಲಿ ನಾವು ಸ್ವಾದೀನದಲ್ಲಿ ಇದ್ದೆವು ಎಂದರೆ ಸರಿಯಲ್ಲ.

ಸದರಿ ಸರ್ಕಾರದಿಂದ ಮಂಜಾರಾತಿ ಆದ ಸಮಯದಲ್ಲಿ ಜಮೀನಿನ್ನು ಇತರಿಗೆ ಪರಬಾರೆ ಮಾಡದೇ ಅವರ ಅಣ್ಣತಮ್ಮಂದಿರ ಮದ್ಯೆ ಭಾಗ ಮಾಡಿಕೊಳ್ಳಬಹುದು ಎಂಬ ಷರತ್ತು ಇತ್ತು ಎಂದರೆ ಸರಿಯಲ್ಲ. ಸರ್ವೆ ನಂ. 198 ನನ್ನ ತಂದೆ ಹೆಸರಿನಲ್ಲಿ ಬರುತ್ತಾ ಇದೆ ಆದರೆ ನನಗೆ ಅಷ್ಟಾಗಿ ಗೊತ್ತಿಲ್ಲ. ದಾವೆಯ ದಾಖಲೆಗಳ ಜೊತೆಯಲ್ಲಿ ಸರ್ವೆ ನಂ. 198ಕ್ಕೆ ಸಂಬಂಧಿಸಿದಂತೆ ಮಂಜೂರಾತಿ ಪತ್ರವನ್ನಾಗಲಿ ಅಥವಾ ಪಹಣಿಯನ್ನಾಗಲಿ ಕೊಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ.

ದಾವಾ ಸರ್ವೆ ನಂಬರ್‌ನಲ್ಲಿ ಯಾವುದೇ ಬಾವಿ ಇರುವುದಿಲ್ಲ ಮಳೆ ಬಂದಲ್ಲಿ ಮಾತ್ರ ವ್ಯವಸಾಯ ಮಾಡಲು ಸಾದ್ಯ ಎಂದರೆ ಸರಿ . 1957ನೇ ಸಾಲಿನಿಂದ 1997ನೇ ಸಾಲಿನವರೆಗೆ ನನ್ನ

ತಂದೆ ಮುನಿಸ್ವಾಮಿ ಮತ್ತು ಅವರ ಸಹೋದರ ದೊಡ್ಡಚಲುವಪ್ಪ ಜಂಟಿ ಸ್ವಾದೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪ ದೊಡ್ಡಚಲುವಪ್ಪ ಮರಣ ಹೊಂದಿದ ವರ್ಷ ನನಗೆ ಗೊತ್ತಿಲ್ಲ. ನನಗೆ ಸ್ವತ್ತಿನ ಬಗ್ಗೆ ಸಂಪೂರ್ಣ ಮಾಹಿತಿ ಗೊತ್ತಿದ್ದರೂ ಸಹ ನ್ಯಾಯಾಲಯದ ಎದುರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಸರ್ವೆ ನಂ. 117 ಅಂದರೆ ಹೊಸ ಸರ್ವೆ ನಂ. 211ರಲ್ಲಿ ಒಂದನೇ ಪ್ರತಿವಾದಿಯ ತಂದೆಗೆ ಎರಡು ಎಕರೆ ಜಮೀನು ಮಂಜೂರು ಆಗಿದ್ದು ಅದರಲ್ಲಿ ಅವರ ಮಕ್ಕಳು ಈಗ ಸ್ವಾದೀನದಲ್ಲಿದ್ದಾರೆ ಎಂದರೆ ಸರಿ . ನನ್ನ ತಂದೆ ಮುನಿಸ್ವಾಮಿಗೆ ಅದೇ ಸರ್ವೆ ನಂಬರ್‌ನಲ್ಲಿ ಮಂಜೂರು ಆದ ಎರಡು ಎಕರೆ ಜಮೀನಿನಲ್ಲಿ ಅವರ ಮಕ್ಕಳಾದ ನಾವುಗಳು ಸ್ವಾದೀನದಲ್ಲಿದ್ದೇವೆಂದರೆ ಸರಿ .

ಸಾಕ್ಷಿಗೆ ವಕಾಲತ್ತಿನ ಮೇಲೆ ಇರುವ ಅವರ ಸಹಿಯನ್ನು ತೋರಿ ಸದರಿ ಸಹಿ ಯಾರದು ಎಂದು ಕೇಳಲಾಗಿ ಸಾಕ್ಷಿಯು ವಕಾಲತ್ತಿನಲ್ಲಿರುವ ಅವರ ಸಹಿಯನ್ನು ನೋಡಿ ಗುರುತಿಸಿ ಯಾರೋ ನನ್ನ ಕೈಯನ್ನು ಹಿಡಿದು ಸಹಿ ಹಾಕಿಸಿರುತ್ತಾರೆ ನನಗೆ ಗೊತ್ತಿಲ್ಲ ಎಂದು ನುಡಿದಿದ್ದರ ಮೇರೆಗೆ ಸದರಿ ವಕಾಲತ್ತನ್ನು ನಿಸಿ 1 ಎಂದು ವಕಾಲತ್ತಿನ ಮೆಲೆ ಸಾಕ್ಷಿಯ ಸಹಿಯನ್ನು ನಿಸಿ 1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ವಾದ ಪತ್ರದ ಮೇಲೆ ಇರುವ ಸಹಿಯನ್ನು ತೋರಿಸಿ ಸದರಿ ಸಹಿ ಯಾರದು ಎಂದು ಕೇಳಲಾಗಿ ಸಾಕ್ಷಿ ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ವಾದ ಪತ್ರದ ಮೇಲೆ ಇರುವ ಸಹಿ ನಿಮ್ಮದೇ ಎಂದು ಪ್ರಶ್ನಿಸಲಾಗಿ ಸಾಕ್ಷಿಯು ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ.

ದಿಃ 06-03-1992ರಲ್ಲಿ ನನ್ನ ತಂದೆಯ ಮಕ್ಕಳಾದ ನಾನು ಮತ್ತು ನನ್ನ ಸಹೋದರರು ಹಾಗೂ ನನ್ನ ದೊಡ್ಡಪ್ಪನ ಮೂರು ಜನ ಮಕ್ಕಳೊಂದಿಗೆ ವಿಭಾಗ ಪತ್ರ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗ ಪತ್ರದ ಆದಾರದ ಮೇಲೆ ಸರ್ವೆ ನಂ. 198ರಲ್ಲಿ ಒಂದು ಎಕರೆ ಜಮೀನು ನನ್ನ ದೊಡ್ಡಪ್ಪ ದೊಡ್ಡಚಲುವಪ್ಪನ ಮಕ್ಕಳಿಗೆ ಹಾಗೂ ಒಂದು ಎಕರೆ ನನಗೆ ಮತ್ತು ನನ್ನ ಸಹೋದರರಿಗೆ ಹೋಗಿದ್ದು ದಾವಾ ಸರ್ವೆ ನಂಬರ್‌ನಲ್ಲಿ ನಮ್ಮಗಳಿಗೆ ಬಂದ

ಮಂಜೂರಾತಿಯ ಪ್ರಕಾರ ಎರಡೆರಡು ಎಕರೆ ಜಮೀನಿನಲ್ಲಿ ನಾವುಗಳು ಒಟ್ಟು ಪ್ರತ್ಯೇಕವಾಗಿ ಮೇಲೆ ಹೇಳಿದಂತೆ ಮೂರು ಎಕರೆ ಜಮೀನಿನಲ್ಲಿ ಮುನಿಸ್ವಾಮಿಯ ಮಕ್ಕಳಾದ ನಾವು ಪ್ರತ್ಯೇಕವಾಗಿ ಹಾಗೂ ದೊಡ್ಡಚಲುವಪ್ಪನ ಮಕ್ಕಳು ಪ್ರತ್ಯೇಕವಾಗಿ ಮೂರು ಎಕರೆ ಜಮೀನಿನಲ್ಲಿ ಸ್ವಾದೀನದಲ್ಲಿದ್ದೇವೆಂದರೆ ಗೊತ್ತಿಲ್ಲ.

ಸದರಿ ವಿಭಾಗ ಪತ್ರದ ಆದ ನಂತರ ಅಂದರೆ 1992ನೇ ಸಾಲಿನ ನಂತರ ನಾವು ಒಂದೇ ಮನೆಯಲ್ಲಿ ವಾಸವಾಗಿರುವುದಿಲ್ಲ ಎಂದರೆ ಸರಿ. 1992ರಿಂದ 1996ನೇ ಸಾಲಿನವರೆಗೂ ನಮಗೂ ಮತ್ತು 1 ರಿಂದ 4ನೇ ಪ್ರತಿವಾದಿಯರಿಗೂ ಯಾವುದೇ ಮನಸ್ತಾಪ ಇರಲಿಲ್ಲ ಎಂದರೆ ಸರಿಯಲ್ಲ. 1996ರಲ್ಲಿ ಪುನಹ ನನ್ನ ಮತ್ತು 1 ರಿಂದ 4ನೇ ಪ್ರತಿವಾದಿಯ ಮದ್ಯೆ ಮನಸ್ತಾಪ ಉಂಟಾದ ಕಾರಣ ಪುನಹ ಮತ್ತೊಂದು ವಿಭಾಗ ಪತ್ರ ಮಾಡಿಕೊಂಡಿರುತ್ತೇವೆಂದರೆ ನನಗೆ ಗೊತ್ತಿಲ್ಲ. 196ರಲ್ಲಿ ಪಂಚಾಯಿತಿ ಮಾಡಿ ಹಿರಿಯರ ಸಮಕ್ಷಮದಲ್ಲಿ ಪುನಹ ವಿಭಾಗ ಪತ್ರ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಇದಾದ ನಂತರ ನನ್ನ ಮತ್ತು 1ನೇ ಪ್ರತಿವಾದಿ ಮದ್ಯೆ 2007ನೇ ಸಾಲಿನಲ್ಲಿ ಮತ್ತೊಂದು ಕರಾರು ಆಗಿರುತ್ತದೆ ಸಾಕ್ಷಿ ಮುಂದುವರೆದು ಸುಳ್ಳು ದಾಖಲೆ ಸೃಷ್ಟಿಸಿರುತ್ತಾರೆಂದು ನುಡಿಯುತ್ತಾರೆ. ಸಾಕ್ಷಿಗೆ 2007ರ ಒಂದು ಕರಾರು ಯಾ ಅಗ್ರಿಮೆಂಟ್ ದಾಖಲೆಯನ್ನು ತೋರಿಸಿ ಅದರಲ್ಲಿರುವ ಸಹಿ ನಿಮ್ಮದಾ ಎಂದು ಕೇಳಲಾಗಿ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಕಣ್ಣು ಅಷ್ಟಾಗಿ ಕಾಣುವುದಿಲ್ಲ ಆದರೆ ಸದರಿ ಸಹಿಯನ್ನು ಕೈ ಹಿಡಿದು ಹಾಕಿರುತ್ತಾರೆ ಎಂದು ಅವರ ಸಹಿಯನ್ನು ನೋಡಿ ಗುರುತಿಸಿದ್ದರ ಮೇರೆಗೆ ಸದರಿ ದಾಖಲೆಯನ್ನು ನಿಡಿ 2 ಅದರ ಮೇಲಿರುವ ಸಾಕ್ಷಿ ಸಹಿಯನ್ನು ನಿಡಿ 2(ಎ) ಎಂದು ಗುರುತಿಸಲಾಯಿತು. ದಾವಾ ಸ್ವತ್ತಿನಲ್ಲಿ ಈಗ ನನ್ನ ಹಾಗೂ ದೊಡ್ಡಚಲುವಪ್ಪನ ಮಕ್ಕಳ ಹೆಸರಿನಲ್ಲಿ ಪಹಣಿ ಬರುತ್ತಾ ಇದೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಮೇಲೆ ಉಪವಿಭಾಗಾಧಿಕಾರಿ , ಕೋಲಾರ ರವರ ಮುಂದೆ ನಾನು 1 ರಿಂದ 4ನೇ ಪ್ರತಿವಾದಿಯರ ಮೇಲೆ ಅರ್ಜಿ ಸಲ್ಲಿಸಿ ಪ್ರಕರಣವನ್ನು ನಡೆಸುತ್ತಿದ್ದೆನು ಎಂದರೆ ಸರಿ . ನಿಪಿ 13ರ ಮಂಜೂರಾತಿ ಪತ್ರದಲ್ಲಿ ಮೂರನೇ ಪುಟದಲ್ಲಿ ಬಾವಿ ಇದೆ ಎಂದು ಸುಳ್ಳು ದಾಖಲೆಯನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ನಿಪಿ 1 ರಿಂದ

18ರ ದಾಖಲೆಗಳನ್ನು ನ್ಯಾಯೂಲಯಕ್ಕೆ ಹಾಜರುಪಡಿಸುವಂತೆ ನಮ್ಮ ವಕೀಲರಿಗೆ ನಾನೇ ಕೊಟ್ಟಿರುತ್ತೇನೆ. ನಿಪಿ 15ರಲ್ಲೂ ಸಹ ಬಾವಿ ಇದೆ ಎಂದು ತೋರಿಸಿ ಸುಳ್ಳು ದಾಖಲೆಗಳನ್ನು ತೋರಿಸಿ ನ್ಯಾಯಾಲಯಕ್ಕೆ ತಂದು ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನನ್ನ ತಂದೆಯವರು ದಾಖಲೆಯನ್ನು ತಂದಿರುತ್ತಾರೆಂದು ನುಡಿಯುತ್ತಾರೆ. ನನ್ನ ತಂದೆ ಮರಣ ಹೊಂದಿದ ವರ್ಷ ನನಗೆ ನಿಖರವಾಗಿ ಹೇಳಲು ಬರುವುದಿಲ್ಲ.

ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ಮಾಲೀಕತ್ವದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವೆಯನ್ನು ಸರ್ವೆ ನಂ. 211ರ ಮೇಲೆ ದಾಖಲಿಸಿರುತ್ತೇನೆ. ಪ್ರತಿವಾದಿಯ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಹಾಗೂ ಅಕ್ರಮ ಲಾಭ ಗಳಿಸುವ ಉದ್ದೇಶದಿಂದ ಪ್ರತಿವಾದಿಯರ ಮೇಲೆ ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ಸ್ವಾದಿನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ಹೇಳಿದ ಹಾಗೆ ಯಾವುದೇ ವ್ಯಾಜ್ಯ ಕಾರಣ ಇಲ್ಲದೇ ಇದ್ದರೂ ಸಹ ಸುಳ್ಳು ವ್ಯಾಜ್ಯ ಕಾರಣ ತೋರಿಸಿ ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯರ ಮೇಲೆ ಹಲವಾರು ದಾವೆಗಳನ್ನು ಮತ್ತು ಪ್ರಕರಣಗಳನ್ನು ದಾಖಲಿಸಿ ಅವರಿಗೆ ತೊಂದರೆ ಕೊಡುತ್ತಾ ಬಂದಿದ್ದೇನೆಂದರೆ ಸರಿಯಲ್ಲ. ನಿಪಿ 1 ರಿಂದ 18ರ ದಾಖಲೆಗಳಿಗೂ ಮತ್ತು ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)**

**ಓ ಹೇ ಕೇ ಸರಿ ಇದೆ.**

**(ಎ.ಸಿ.ದಯಾನಂದ ಮೂರ್ತಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬಂಗಾರಪೇಟೆ.**